


ನನಗೆ ಮೊದಲನೇ ಭಾಗದ ಕೌರವ ಪಾತ್ರ ಮಾಡಲು ದೊರೆಯಿತು. ಪ್ರೇಕ್ಷಕರು ನನಗೆ ಹೆಚ್ಚಿನ ಮತ ನೀಡಿದ್ದರಿಂದ ಚಿನ್ನದ ಬಹುಮಾನ ದೊರೆಯಿತು. ದೈವಾನುಗ್ರಹವಿಲ್ಲದೆ ನಾನು ಇಷ್ಟು ದಿನಗಳ ಕಾಲ ಬದುಕುತ್ತಿದ್ದೇನೇ, ಇಷ್ಟೆಲ್ಲ ಕೆಲಸಗಳನ್ನು ನಿರ್ವಹಿಸುತ್ತಿದ್ದೇನೆ... ಎಂದು ವಿಸ್ಮಯಗೊಳ್ಳುತ್ತೇನೆ. ಬರಿಗೈಯ ಹುಡುಗ, ಸೋಲನ್ನು ಕಂಡು ಕಂಡು ಅದನ್ನು ದಾಟುತ್ತ ಇಷ್ಟು ದೂರ ಕ್ರಮಿಸಬೇಕಾದರೆ, ದೈವಾನುಗ್ರಹವೇ ಕಾರಣ ಎಂದು ಸುಮ್ಮನಾಗುತ್ತೇನೆ.

◆ **ಗೌರವ ಸನ್ಮಾನಗಳು ನಿಮ್ಮನ್ನು ಹುಡುಕಿಕೊಂಡು ಬಂದಿದೆ. ನೀವೇಕೋ ಅವುಗಳತ್ತ ಸಿಡಿಮಿಡಿಗುಟ್ಟಿದಂತೆ ಭಾಸವಾಗುತ್ತದೆ?**

ಪ್ರಶಸ್ತಿಗಳು ಬಂದಿವೆ. ಅಭಿಮಾನಿಗಳು ಸನ್ಮಾನಗಳನ್ನು ನಡೆಸಿದ್ದಾರೆ. ಮೇಳದಲ್ಲಿರುವಾಗ ಸನ್ಮಾನಗಳದ್ದೊಂದು ದೊಡ್ಡ ಸಮಸ್ಯೆಯೇ ಆಗುತ್ತಿತ್ತು. 'ಗೋವಿಂದ ಭಟ್ಟರನ್ನು ನೋಡಬೇಕಾಗಿತ್ತು' ಎಂದು ಬಂದ ಎಷ್ಟೋ ಜನರ ಬಳಿ ನಾನು ಬೇರೊಬ್ಬರು ಗೋವಿಂದ ಭಟ್ಟರನ್ನು ತೋರಿಸಿಬಿಡುತ್ತಿದ್ದೆ. ನಮ್ಮ ಶ್ರಮಕ್ಕೆ ಎಷ್ಟು ಸಲ್ಲಬೇಕೋ ಅಷ್ಟನ್ನು ಮಾತ್ರ ನಾವು ಪಡೆಯಬೇಕು. ಅದಕ್ಕಿಂತ ಒಂದು ಗುಲಗುಂಜಿಯಷ್ಟಾದರೂ ಹೆಚ್ಚು ಪಡೆದರೆ ಅದು ಒಂದಲ್ಲ ಒಂದು ರೀತಿಯಲ್ಲಿ ನಷ್ಟವಾಗಿ ಹೋಗುವುದು ಎಂದು ಬಲವಾಗಿ ನಂಬಿದವನು ನಾನು. ಮತ್ತೆ ಸನ್ಮಾನಗಳಲ್ಲಿ ಎರಡು ವಿಧವಿದೆ. ನಿಜವಾಗಿಯೂ ಆಧರಿಸುವವರು ಒಂದು ವಲಯದವರಾದರೆ,